**ಸಿಸಿ ನಂಃ 1717/2021**
**ಚಾಸಾ.6/ಪ್ರಸಾ.5**

**ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ., ಧಾರವಾಡ**

**ಸಾಕ್ಷಿದಾರನ ಹೆಸರುಃ ಕೃಪೇಂದ್ರ ಮೂರ್ತಿ ಕೆ ಎನ್**
**ವಯಸ್ಸುಃ 33 ವರ್ಷ**
**ಉದ್ಯೋಗಃ ಎಪಿಸಿ-212**
**ವಾಸಸ್ಥಳಃ ರಾಮನಗರ ಜಿಲ್ಲೆ**

ಸತ್ಯ ಪ್ರತಿಜ್ಞೆಯ ಮೇರೆಗೆ ದಿ. **20.03.2023.**

**ಮುಖ್ಯ ವಿಚಾರಣೆಃ ಮಾನ್ಯ ಹಿಸಸಅ ರವರಿಂದ**

ನಾನು 2017 ನೇ ಸಾಲಿನಲ್ಲಿ ರಾಮನಗರ ಜಿಲ್ಲ ಯಲ್ಲಿ ಡಿ ಎ ಆರ್ ಪೋಲಿಸ ಪೇದೆಯಾಗಿ ಅಯ್ಕೆಯಾಗಿದ್ದು. ನಂತರ ನಾವು ಧಾರವಾಡದ ತಾತ್ಕಾಲಿಕ ಪೋಲಿಸ ತರಬೇತಿ ಶಾಲೆಯಲ್ಲಿ ತರಬೇತಿ ಪಡೆಯಲು ನಿಯೋಜನೆಗೊಂಡೆವು. ದಿಃ 17.05.2018 ರಂದು ಮದ್ಯಾಹ್ನ 1.40 ಗಂಟೆ ಸಮಯದಲ್ಲಿ ಓರ್ವ ಮಹಿಳೆ ನನ್ನ ಮೊಬೈಲ ನಂ.8951444184 ಗೆ ಕರೆ ಮಾಡಿ ತಾನು ಧಾರವಾಡದ ಎಸ್ ಪಿ ಸಂಗೀತಾ ರವರು ಮಾತನಾಡುತ್ತಿದ್ದು ಎಂದು ಹೇಳಿ ಓರ್ವ ಅಜ್ಜಿ ನಾಗವ್ವ ಎಂದಬುವವರು ಹೃದಯ ಖಾಯಿಲೆಯಿಂದ ಬಳಲುತ್ತಿದ್ದು ಅವರ ಚಿಕಿತ್ಸೆಗೆ ಎಲ್ಲರಿಂದ ತಲಾ 2 ಸಾವಿರ ರೂಪಾಯಿ ಸಂಗ್ರಹಿಸಿ ಎಂದು ನನಗೆ ತಿಳಿಸಿ ನನಗೆ ಬೆದರಿಕೆ ಹಾಕಿದರು. ಅದೇ ರೀತಿ ಕರೆಯನ್ನು ಚಾಸಾ7 ರಿಂದ 9 ಬಂದಿರುತ್ತದೆ. ಹಾಗೂ ಚಾಸಾ1 ರವರಿಗೂ ಸಹ ಅದೇ ತರಹದ ಕರೆ ಬಂದಿರುತ್ತದೆ. ಅದಕ್ಕೆ ಸದರಿ ವಿಪಯವನ್ನ ನಾವು ಚಾಸಾ1 ರವರಿಗೆ ತಿಳಿಸಿ ಚಾಸಾ1 ರವರು ಸದರಿ ವಿಷಯವನ್ನು ಅವರ ಮೇಲಾಧಿಕಾರಿ ಗಳಿಗೆ ತಿಳಿಸಿ ಆ ಬಗ್ಗೆ ಪೋಲಿಸ ಠಾಣೆಗೆ ದೂರು ನೀಡಿರುತ್ತಾರೆ.

ಸದರಿ ನನ್ನ ಸ್ಯಾಮಸಂಗ ಮೊಬೈಲ ಚಿಪ್ ನಲ್ಲಿ ಸದರಿ ಅನಾಮಧೇಯ ವ್ಯಕ್ತಿ ಮಾಡಿದ ಕರೆ ರೆಕಾರ್ಡ ಆಗಿದ್ದು ಸದರಿ ಚಿಪ್ ನ್ನು ನಾನು ಪೋಲಿಸರಿಗೆ ಒದಗಿಸಿರುತ್ತೇನೆ. ನತಂರ ಪೋಲಿಸರು ಸದರಿ ಪ್ರಕರಣಕ್ಕೆ ಸಂಬಂದಿಸಿದಂತೆ 4 ಜನ ಮಹಿಳೆಯನ್ನು ಬಂದಿಸಿರುವುದಾಗಿ ತಿಳಿಸಿದರು. ಸದರಿ ಬಂಧನಕ್ಕೆ ಒಳಗಾದ

ಮಹಿಳೆಯ ಹೆಸರು ನನಗೆ ಈಗ ಹೇಳಲು ಬರುವುದಿಲ್ಲ. ಸದರಿಯವರ ಪೈಕಿ ಓರ್ವರ ಹೆಸರು ಗಿರಿಜವ್ವ ಎಂದು ಹೇಳಿದ್ದು ನನಗೆ ಗೊತ್ತಿದೆ.

ದಿಃ 20.05.2018 ರಂದು ಪುನಃ ಸದರಿ ಅನಾಮಧೇಯ ವ್ಯಕ್ತಿ ಧಾರವಾಡದ ಎಸ ಪಿ ಸಂಗೀತಾ ಎಂದು ಸದರಿಯವರ ಹೆಸರು ಬಳಸಿ ತಲಾ ಒಬ್ಬೊಬ್ಬರಿಂದ 2 ಸಾವಿರ ರೂಪಾಯಿ ಸಂಗ್ರಹಿಸಿ ಇಟ್ಟುಕೊಳ್ಳಿ ನಾನು ಹೇಳಿದಾಗ ಸದರಿ ಹೃದಯ ಖಾಯಿಲೆಯಿಂದ ಬಳಲುತ್ತಿದ್ದ ಅಜ್ಜಿಗೆ ನೀಡುವಿರಂತೆ ತಿಳಿಸಿದ್ದರು. ಸದರಿ ಹಣ ಸಂಗ್ರಹಿಸುವ ವಿಚಾರ ನಮ್ಮ 4 ಜನರಿಗೆ ಬಿಟ್ಟು ಬೇರೆ ಯಾರಿಗೂ ಹೇಳಬಾರದು ಎಂದು ಹಾಗೂ ನಮ್ಮ ಮೇಲಾಧಿಕಾರಿ ಗಳಿಗೆ ಹೇಳಬಾರದು ಎಂದು ಸದರಿ ಕರೆಯಲ್ಲಿ ತಿಳಿಸಿದ್ದರು. ಸದರಿ ನಾನು ನೀಡಿದ ಮೆಮೊರಿ ಕಾರ್ಡನ್ನು ಪೋಲಿಸರು ಪಂಚನಾಮೆ ಜರುಗಿಸುವ ಮೂಲಕ ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.**10** ಎಂದು ಗುರುತಿಸಲಾಗಿದ್ದು **,** ಸಾಕ್ಷಿಯ ಸಹಿಯನ್ನು **ನಿಪಿ.10(ಬಿ)** ಎಂದು ಗುರುತಿಸಲಾಯಿತು**.** ಸದರಿ ಅನಾಮಧೇಯ ವ್ಯಕ್ತಿಯೊಂದಿಗೆ ಅದ ಸಂಭಾಷಣೆಯನ್ನು ಮುದ್ರಣ ಮಾಡಲಾಗಿದ್ದು ಸದರಿ ಪ್ರತಿಗಳಿಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ಸಂಭಾಷಣೆಯ ಪ್ರತಿ ಚಾರ್ಜ ಶೀಟನ ಪೇಜ ನಂ.30 ರಿಂದ 43 ವರೆಗೆ ಇದ್ದು ಸಾಕ್ಷಿ ಅದನ್ನು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ.11** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು **ನಿಪಿ.11(ಎ)** ಎಂದು ಗುರುತಿಸಲಾಯಿತು. ಸದರಿ ಮೆಮೊರಿ ಕಾರ್ಡನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ಎಂಓ 5** ಎಂದು ಗುರುತಿಸಲಾಯಿತು**.** ಸದರಿ 4 ಜನರನ್ನು ಪೋಲಿಸರು ಬಂದಿಸಿದ್ದರು ಅವರ ಪೈಕಿ ಈಗ ನ್ಯಾಯಾಲಯದಲ್ಲಿ ಓರ್ವ ಮಹಿಳೆ ಹಾಗೂ ಓರ್ವ ಜಗನ್ನಾತ ಗೋಡಿ ಹಾಜರಿದ್ದು ಟ್ರೆನಿಂಗ ಶಾಲೆಯಲ್ಲಿ ಎಡಿಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿ ಜಗನ್ನಾತ ಗೊಡಿ 2 ನೇ ಆರೋಪಿ ಆಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ ಎಸ್ ಶಿಂಧೆ ವಕೀಲರಿಂದ.**

1. ನಾನು ಕಳೆದ ಐದುವರೆ ವರ್ಷಗಳಿಂದ ಡಿ ಆರ್ ಪೋಲಿಸ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಒಂದು

ಬಾರಿ ಮಾತ್ರ ಹೇಳಿಕೆ ನೀಡಿದ್ದು ಯಾವ ದಿನಾಂಕದಂದು ಹೇಳಿಕೆ ನೀಡಿರುತ್ತೇನೆ ಎಂದು ನನಗೆ ನೆನಪಿಲ್ಲ. ನಾನು ಎಂಓ5 ನ್ನು ಯಾವ ದಿನಾಂಕದಂದು ಪೋಲಿಸರಿಗೆ ನೀಡಿರುತ್ತೇನೆ ಎಂದು ನನಗೆ ನೆನಪಿಲ್ಲ. ನಾನು ಧಾರವಾಡದಲ್ಲಿ ತರಬೇತಿಯನ್ನು 4 ತಿಂಗಳುಗಳ ಕಾಲ ಪಡೆದ ನಂತರ ಸದರಿ ಈ ಪ್ರಕರಣದ ಕರೆ ಬಂದಿತ್ತು. ಯಾವುದಾರೊಂದು ಘಟನೆಗೆ ಸಂಬಂದಿಸಿದಂತೆ ದೂರನ್ನು ಯಾರಿಗೆ ನೀಡಿಬೇಕು ಎಂದು ತರಬೇತಿಯಲ್ಲಿ ಹೇಳಿರುತ್ತಾರೆ ಎಂದರೆ ಸರಿ. ಸದರಿ ನಮ್ಮ ತರಬೇತಿ ಶಾಲೆಯ ಪ್ರಾಶುಂಪಾಲ ಧಾರವಾಡದ ಎಸ್ ಪಿ ರವರಾದ ಸಂಗೀತಾ ರವರು ಇದ್ದರು. ಸದರಿ ನನ್ನ ತರಬೇತಿಯ ಅವಧಿಯಲ್ಲಿ ಸದರಿ ಪ್ರಾಶುಂಪಾಲರು ಸಾಕಷ್ಟು ಬಾರಿ ತರಬೇತಿ ಶಾಲೆಗೆ ಬಂದಿದ್ದರಿಂದ ಅವರ ಮುಖ ಪರಿಚಯ ಹಾಗೂ ಅವರ ಧ್ವಿನಿಯ ಪರಿಚಯ ನನಗೆ ಇತ್ತು ಎಂದರೆ ಸರಿ. ಸದರಿ ಪ್ರಾಶುಂಪಾಲರ ದೂರವಾಣಿ ಸಂಖ್ಯೆ ಹಾಗೂ ಮೊಬೈಲ ನಂತರ ಗೊತ್ತಿತ್ತು ಎಂದರೆ ಸರಿಯಲ್ಲ.

2. ದಿಃ 17.05.2018 ರಂದು ನನಗೆ ಯಾವ ನಂಬರನಿಂದ ಕರೆ ಬಂದಿತ್ತು ಎಂದು ಅದರ ಸಂಪೂರ್ಣ ನಂಬರ ನನಗೆ ನೆನಪಿಲ್ಲ. ದಿಃ 17.05.2018 ಮತ್ತು ದಿಃ 20.05.2018 ರಂದು ನನಗೆ ಬಂದ ಕರೆಗಳಲ್ಲಿ ಮಾತನಾಡುವ ವ್ಯಕ್ತಿಯ ಧ್ವನಿ ನಮ್ಮ ತರಬೇತಿ ಶಾಲೆಯ ಪ್ರಾಶುಂಪಾಲರ ತರಹ ಇತ್ತು. ಸದರಿ ಕರೆಗಳ ಮಾಡುವ ವ್ಯಕ್ತಿಯ ಬಗ್ಗೆ ನನಗೆ ಅನುಮಾನ ಬಂದಿತ್ತು. ಸದರಿ ಅನುಮಾನದ ವಿಷಯವನ್ನು ನಾನು ನಮ್ಮ ಪ್ರಾಶುಂಪಾಲರಿಗೆ ತಿಳಿಸಲಿಲ್ಲ. ಸಾಕ್ಷಿ ಮುಂದುವರೆದು ನೇರವಾಗಿ ತಿಳಿಸಲಿಲ್ಲ ಎನ್ನುತ್ತಾರೆ. ಸದರಿ ಅನುಮಾನದ ವಿಷಯವನ್ನು ನಾನು ಮೊದಲ ಬಾರಿಗೆ ಚಾಸಾ1 ರವರಿಗೆ ತಿಳಿಸಿದ್ದೆ. ಸದರಿ ಅನುಮಾನದ ವಿಷಯವನ್ನು ನಾನು ನೇರವಾಗಿ ಯಾವುದೇ ಪೋಲಿಸ ಠಾಣೆಗೆ ತಿಳಿಸಿಲ್ಲ. ಸದರಿ ವಿಷಯಕ್ಕೆ ಸಂಬಂದಿಸಿದಂತೆ ನಾನು ಸ್ವತಃ ದೂರು ನೀಡಲಿಲ್ಲ. ನಮ್ಮ ತರಬೇತಿ ಶಾಲೆ ಹಾಗೂ ಎಸ ಪಿ ಕಚೇರಿ ಒಂದೇ ಕಟ್ಟಡದಲ್ಲಿ ಇವೆ ಎಂದರೆ ಸರಿಯಲ್ಲ. ನಮ್ಮ ತರಬೇತಿ ಶಾಲೆಯಿಂದ ಎಸ್ ಪಿ ಕಚೇರಿ 3 ಕಿ ಮಿ ಅಂತರದಲ್ಲಿ ಇರಬಹುದು. ಧಾರವಾಡ

ಗ್ರಾಮಿಣ ಪೋಲಿಸ ಠಾಣೆ ನಮ್ಮ ತರಬೇತಿ ಶಾಲೆಯ ಪಕ್ಕದಲ್ಲಿ ಇದೆ. ಸದರಿ ಠಾಣೆಗೆ ಹೊಗಲು ನಮ್ಮ ಶಾಲೆಯಿಂದ 2 ನಿಮಿಷ ಸಾಕು ಎಂದರೆ ಸರಿ. ದಿಃ 17 ಮತ್ತು 20 ರಂದು ಕರೆ ಬಂದಿದುದ್ದಕ್ಕೆ ಸಂಬಂದಿಸಿದಂತೆ ದೂರು ನೀಡಲು ತೊಂದರೆ ಏನು ಇರಲಿಲ್ಲ ಸಾಕ್ಷಿ ಮುಂದುವರೆದು ನಮ್ಮ ಮೇಲಾಧಿಕಾರಿಗಳ ಅನುಮತಿ ಪಡೆಯದೇ ನಾವು ದೂರು ನೀಡುವ ಹಾಗಿಲ್ಲ ಎನ್ನುತ್ತಾರೆ. ನಾನು ಚಾಸಾ1 ರವರಿಗೆ ಸದರಿ ವಿಷಯವನ್ನು ತಿಳಿಸಿದ್ದ ದಿನಾಂಕ ನೆನಪಿಲ್ಲ.

3. ಸದರಿ ನಾನು ಬಳಸುತ್ತಿದ್ದ ಮೊಬೈಲನಲ್ಲಿ ಅಟೋಮೆಟಿಕ ಕಾಲ್ ರೆಕಾರ್ಡರ್ ಅಪ್ಲಿಕೇಷನ ಇತ್ತು. ದಿಃ 20.05.2018 ರಂದು ನನಗೆ ರಾತ್ರಿ 8 ರ ಸಮಯದಲ್ಲಿ ಸದರಿ ಕರೆ ಬಂದಿತ್ತು. ಎಂಓ 5 ನ್ನು ಪೋಲಿಸರು ನನ್ನಿಂದ ಪಡೆದ ಬಗ್ಗೆ ನನಗೆ ಸ್ವಿಕೃತಿಯನ್ನು ನೀಡಿಲ್ಲ. ತರಬೇತಿ ಶಾಲೆಯಲ್ಲಿ ನಮ್ಮ ಮೇಲಾಧಿಕಾರಿ ಎಂದರೆ ಧಾರವಾಡದ ಎಸ್ ಪಿ ರವರು ಆಗಿರುತ್ತಾರೆ. ನಿಪಿ.10 ಪಂಚನಾಮೆಯನ್ನು ಯಾವ ದಿನಾಂಕದಂದು ಯಾವ ಸಮಯದಿಂದ ಯಾವ ಸಮಯವರೆಗೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನಿಂದ ಸದರಿ ಎಂಓ 5 ನ್ನು ಪಡೆಯುವ ಕಾಲಕ್ಕೆ ಆರೋಪಿತರನ್ನು ನನಗೆ ತೋರಿಸಿದ್ದರು. ಸದರಿ ನಿಪಿ.10 ಪಂಚನಾಮೆಯನ್ನು ಕೈಯಿಂದ ಬರೇದರೋ ಅಥವಾ ಬೆರಳಚ್ಚು ಮಾಡಿದರೋ ನನಗೆ ನೆನಪಿಲ್ಲ. ಪಂಚನಾಮೆ ಕಾಲಕ್ಕೆ ತನಿಖಾಧಿಕಾರಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ಸಮಯದಲ್ಲಿ ನಾನು ಎಷ್ಟು ಸಹಿಗಳನ್ನು ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ನನ್ನ ಸಮಕ್ಷಮ ಎಂಓ 5 ರಲ್ಲಿದ್ದ ಸಂಭಾಷಣೆಯನ್ನು ಬರವಣಿಗೆ ಮಾಡಿರುತ್ತಾರೆ. ಎಂಓ 5 ನ್ನು ನನ್ನಿಂದ ಪಡೆದು ಅದನ್ನು ಕಂಪ್ಯೂಟರಗೆ ಹಾಕಿ ಅದರಲ್ಲಿ ಅದನ್ನು ಪ್ಲೇ ಮಾಡಿ ಅದರಿಂದ ಬಂದ ಸಂಭಾಷಣೆಯನ್ನು ಬರವಣಿಗೆ ಮಾಡಿರುತ್ತಾರೆ. ಸದರಿ ಸಂಭಾಷಣೆಯಲ್ಲಿನ ವ್ಯಕ್ತಿಗಳ ಧ್ವನಿಯನ್ನು ಯಾರೂ ಸಹ ಗುರುತಿಸಲಿಲ್ಲ. ನಿಪಿ.10 ಪಂಚನಾಮೆ ಬರೆಯಲು ಮಾಹಿತಿ ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ

ಕರೆಯಲ್ಲಿ ಮಾತನಾಡಿದ ವ್ಯಕ್ತಿಗಳ ಹೆಸರು ಇದು ಎಂದು ಯಾರು ಗುರುತಿಸಿ ಹೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.10 ಪಂಚನಾಮೆಯನ್ನು ನಾನು ಓದಿ ಸಹಿ ಮಾಡಿರುತ್ತೇನೆ. ನಿಪಿ.10 ಪಂಚನಾಮೆಗೆ ತನಿಖಾಧಿಕಾರಿ ಆರೋಪಿತರ ಸಹಿಗಳನ್ನು ಪಡೆದರೊ ಇಲ್ಲವೂ ನನಗೆ ಗೊತ್ತಿಲ್ಲ. ನಿಪಿ.10 ಕ್ಕೆ ನನ್ನನ್ನು ಬಿಟ್ಟು ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.10 ರಲ್ಲಿ 1 ನೇ ಆರೋಪಿಯ ಹೆಸರು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಘಟನೆಗೆ ಸಂಬಂದಿಸಿದಂತೆ ದೂರನ್ನು ದಾಖಲಿಸಿದ್ದು ಮಾತ್ರ ನನಗೆ ಗೊತ್ತು ಆದರೇ ಯಾರ ವಿರುದ್ದ ದಾಖಲಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ದಿಃ 17.05.2018 ಹಾಗೂ ದಿಃ 20.05.2018 ರಂದು ನನಗೆ ಬಂದ ಕರೆಗಳ ಪಟ್ಟಿಯ ಸ್ಕ್ರಿನ ಶಾರ್ಟನ್ನು ನಾನು ಪಡೆದುಕೊಂಡಿಲ್ಲ. ಸದರಿ ಎಂಓ 5 ನ್ನು ಪೋಲಿಸರು ನನ್ನಿಂದ ಪಡೆದ ನಂತರ ಅದನ್ನು ಸೀಲು ಮಾಡಿದರೊ ಇಲ್ಲವೂ ನನಗೆ ನೆನಪಿಲ್ಲ. ನಿಪಿ.11 ರಲ್ಲಿಯೂ ಸಹ ನಾನು ಯಾವುದೇ ಆರೋಪಿಯ ಹೆಸರನ್ನು ಹೇಳಿಲ್ಲ. ಸದರಿ ಈ ಪ್ರಕರಣದ 4 ಜನ ಆರೋಪಿತರನ್ನು ಪೋಲಿಸರು ಯಾವ ದಿನಾಂಕದಂದು ಬಂದಿಸಿದ್ದರು ಎಂದು ನನಗೆ ಗೊತ್ತಿಲ್ಲ.

4. ದಿಃ 17.05.2018 ಹಾಗೂ ದಿಃ 20.05.2018 ರಂದು ಎಸ್ ಪಿ ಸಂಗೀತಾ ರವರು ಅಂತಾ ಹೇಳಿ ನನಗೆ ಕರೆ ಮಾಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕರೆಯಲ್ಲಿ 2 ಸಾವಿರ ರೂಪಾಯಿ ತಲಾ ತರಬೇತಿ ಪಡೆಯುತ್ತಿರುವ ಪೋಲಿಸರಿಂದ ಸಂಗ್ರಹಿಸಬೇಕು ಎಂದು ನನಗೆ ಹೇಳಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ಪೋಲಿಸರು ನನ್ನಿಂದ ಎಂಓ 5 ನ್ನು ನಿಪಿ.10 ರಂತೆ ಪಂಚನಾಮೆಯನ್ನು ಜರುಗಿಸುವ ಮೂಲಕ ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಹಾಗೂ ನಿಪಿ.11 ರಂತೆ ಸದರಿ ಮೊಬೈಲನಲ್ಲಿದ್ದ ಸಂಭಾಷಣೆಯನ್ನು ಮುದ್ರಣ ಮಾಡಿದರು ಎಂದು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿಸಿ ನಂಃ **1717/2021**
**ಚಾಸಾ**.6/**ಪ್ರಸಾ**.5

<u>**ಮರು ವಿಚಾರಣೆ ಇಲ್ಲ.**</u>

(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೇ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.